275

ಮೈಸೂರ್ ಫಾರೆಸ್ಟ್ ಡಿಪಾರ್ಟ್ಮೆಂಟ್.

ಕೋಲಾರ್ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು 28ನೇ ಫಿಬ್ರುವರಿ 1896ನೇ ಇಸವಿ, ಮೊಕ್ಕಾಂ ಚಿಕ್ಕಬಳ್ಳಾಪುರ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ತಮಾಂ ತಾಲ್ಲೂಕುಗಳಲ್ಲೂ ಫಾರೆಸ್ಟುಗಳಲ್ಲೂ ಸಹ, ತಂಗಡಿ ಮತ್ತು ಕಕ್ಕೆ ಚಕ್ಕೆಯನ್ನ ಜಮಾಯಿಸತಕ್ಕ ಬಗ್ಯೆ ಲೈಸೆನ್ಸ ಕೊಡತಕ್ಕ ಪದ್ಧತಿಯನ್ನ ನಿಲ್ಲಿಸಬೇಕೆಂದು ಹುಕುಂ ಜಾರಿಯಾಗಿರುತ್ತೆ.

(2.) ಇದಕ್ಕೆ ಮೊದಲು ಲೈಸೆನ್ಸ್ ಪಡೆದಿರುವ ಜನಗಳು ಅವರವರ ಲೈಸೆನ್ಸಿನಲ್ಲಿ ಕಂಡ ಚಕ್ಕೆಯನ್ನು ನಿಶ್ಶೇಷವಾಗಿ ಮುಂದಿನ ಏಪ್ರೆಲ್ ತಾರೀಖು 15ರ ಒಳಗಾಗಿ ಸಾಗಿಸಿಕೊಂಡು ಹೋಗತಕ್ಕದ್ದು. ಆ ತಾರೀಖು ಕಳೆದನಂತರ ಸದರೀ ಚಕ್ಕೆಯನ್ನ ಜಮಾಯಿಸುವದಕ್ಕಾಗಲಿ, ಡಿಸ್ಟ್ರಿಕ್ಟಿನಲ್ಲಿ ದಾಸ್ತಾನ್ ಯಿಡುವದಕ್ಕಾಗಲಿ, ಅಥವಾ ರಫ್ತು ಮಾಡತಕ್ಕ ಬಗ್ಯಾಗಲಿ ಯಾವ ಸಂದರ್ಭದಲ್ಲೂ ಅವಕಾಶ ಕೊಡುವದಿಲ್ಲ.

(3.) ಡಿಸ್ಟ್ರಿಕ್ಟ ಮಜಕೂರ್ ತಾಲ್ಲೂಕ್ಕುಗಳಲ್ಲಿ ಈ ಬಾಬುಗಳನ್ನ ಜಮಾಯಿಸಿಕೊಳ್ಳತಕ್ಕ ಹಕ್ಕನ್ನು ಇಜಾರೇದಾರ್ರುಗಳಿಗೆ ಬಹಿರಂಗವಾದ ಹರಾಜಿನಲ್ಲಿ ಪೋಟಾಪೋಟಿಯಿಂದ ಮೊಕರೂರ್ ಮಾಡಲಾಗುತ್ತದೆ. ಸದರೀ ಹರಾಜಿನ ಕ್ರಮ ಮತ್ತು ಷರತ್ತುಗಳನ್ನ ಕಂಡು ಅಲಾಹಿದ ನೋಟಿಸ ಜಾರಿಯಾಗಿರುತ್ತೆ. ಈ ಬಾಬುಗಳನ್ನ ಇಜಾರೇಮಾಡಬೇಕೆಂದು ಉದ್ದೇಶಿಸುವವರು ಕೋಲಾರ್ ಡಿಸ್ಟ್ರಿಕ್ಟ ಫಾರೆಸ್ಟು ಆಫಿಸಿಗೆ ಅರ್ಜಿಯನ್ನ ಬರೆದು ನೋಟಿಸಗಳನ್ನ ತರಿಸಿಕೊಂಡು ತಪ್ಸೀಲ್ ತಿಳಿದುಕೊಳ್ಳಬೇಕಾಗಿ ಕೋರಲ್ಪಟ್ಟಿದೆ.

ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

(1.) ಕೋಲಾರ್ ಡಿಸ್ಟ್ರಿಕ್ಟಿಗೆ ಸೇರಿದ ಇದರಡಿ ನಮೂದಿರುವ ತಾಲ್ಲೂಕುಗಳಲ್ಲಿ ದೊರೆಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಇಜಾರೆಯ ಬಟ್ಟು ಸ್ವತಂತ್ರದ ಹಕ್ಕು ಬಹಿರಂಗವಾಗಿ ಹರಾಜು ಮಾಡಲ್ಪಡುತ್ತದೆ.

ಹರಾಜು ತಾರೀಖು ಮತ್ತು ಹರಾಜು ನಡಿಸುವ ಸ್ಥಳ ವಗೈರೆ ತಪ್ಸೀಲುಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ತಾಲ್ಲೂಕುಗಳು.	ನಂಬರ.	ಹೋಬಳಿಗಳು.	ಇಜಾರೆಯು ಹಕ್ಕಿನ ಕಾಲ.	ಹರಾಜಿನ ತಾರೀಖು.	ಹರಾಜಾಗುವ ಸ್ಥಳ.	ಹರಾಜು ಮಾಡಿಸುವ ಆಫಿಸರುಗಳು.	ಹರಾಜು ಯಾರಿಂದ ಮಂಜೂರಾಗಬೇಕಾದದ್ದು.	ಷರಾ.
I ಕೋಲಾರ	1	ಕೋಲಾರ	1896ನೇ ಇಸವಿ ಜುಲೈ ಗುರ್ರೇ ಲಾಗಾಯತು 1897ನೇ ಜೂನ್ ಆಖೈರ್ ವರೆಗೆ.	1896ನೇ ಇಸವಿ ಮೇ ತಾರೀಖು 14ರಲ್ಲಿ.	ಕೋಲಾರ ಡಿಸ್ಟ್ರಿಕ್ಟು ಕಚೇರಿಯಲ್ಲಿ.	ಕೋಲಾರ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು.	ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ ಸಾಹೇಬರವರಿಂದ.	ತಾಲ್ಲೂಕುವಾರ್ ಹರಾಜು ಜರುಗಿಸಲ್ಪಡುತ್ತದೆ.
	2	ವಕ್ಕಲೇರಿ						
	3	ಹುತ್ತೂರು						
	4	ವೇಮಗಲ್ಲು						
	5	ಸುಗಟೂರು						
	6	ದಳಸನೂರು						
	7	ಹೋಳೂರು						
II ಮಾಲೂರು	1	ಮಾಲೂರು						
	2	ನರಸಾಪುರ						
	3	ಲಕ್ಕೂರು						
	4	ಮಾಸ್ತಿ						
	5	ಹುಳದೇನಹಳ್ಳಿ						
	6	ತ್ಯಾಕಲ್ಲು						
III ಬೌರಿಂಗ್‍ಪೇಟೆ	1	ಬೌರಿಂಗ್ ಪೇಟೆ						
	2	ಬೋದಿಕೋಟೆ						
	3	ಕಾಮಸಮುದ್ರ						
	4	ಬೇತಮಂಗಲ						
	5	ಕ್ಯಾಸಂಬಳ್ಳಿ						
	6	ರಾಮಸಾಗರ						
	7	ದಾಸರಹೊಸಹಳ್ಳಿ						

(2.) ಮೇಲ್ಕಂಡ ತಾರೀಖಿನ ಮಧ್ಯಾನ್ಹ 3 ಘಂಟೆಯ ಲಾಗಾಯತು ಸಾಯಿಂಕಾಲದ ವರೆಗೂ ಹರಾಜು ಕ್ರಮ ಜರಗುವದು ಮತ್ತು ಆ ದಿವಸವೇ ಹರಾಜು ಖೈದಾಗದೇ ಇದ್ದಲ್ಲಿ ಖೈದಾಗುವ ವರೆಗೂ ಮಾರನೇದಿನವೂ ಸಹ ನಡಿಸಲ್ಪಡುತ್ತದೆ.

(3.) ಮೇಲ್ಕಂಡ ಬಟ್ಟು ಸ್ವತಂತ್ರದ ಇಜಾರೆ ಹಕ್ಕು ಡೆಪ್ಯುಟಿ ಕಮ್ಮಿಷನರವರ ಮಂಜೂರಾತಿಗೆ ಒಳಪಟ್ಟು ಆಖೈರ್ ಚಡಸವಾಲ್‌ದಾರ್ರುಗಳಿಗೆ ಕೊಡಲ್ಪಡುವದು. ಆದರೆ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೂ ಅಥವಾ ತಿರಸ್ಕರಿಸುವದಕ್ಕೂ ಸಹ ಡೆಪ್ಯುಟಿ ಕಮ್ಮಿಷನರವರು ಮುಖ್ತ್ಯಾರ್ರಾಗಿದ್ಧಾರೆ. ಪೋಟಾ ಪೋಟೀಯಲ್ಲಿ ನಿಲ್ಲುವ ಆಖೈರ್ ಚಡಸವಾಲ್ ಮೊಬಲಗು ಮೇಲ್ಕಂಡ 12 ತಿಂಗಳ ಕಾಲದಲ್ಲಿ ಕಡದು ಜಮಾಯಿಸಿ ಸಾಗಿಸಿಕೊಳ್ಳಲ್ಪಡುವ ಚಕ್ಕೆಯ ಖರೀದಿ ಎಂದು ಭಾವಿಸಲ್ಪಡುತ್ತದೆ.

(4.) ಇಜಾರೆ ಮಾಡಬೇಕೆಂದು ಅಪೇಕ್ಷಿಸುವವರು ತಾವೇ ಖುದ್ದು ಬಂದು ಹರಾಜಿನಲ್ಲಿ ಚಡಸವಾಲ್ ಮಾಡಬಹುದು. ಅಥವಾ ತಮ್ಮಿಂದ ಅಪ್ಪಣೆ ಹೊಂದಲ್ಪಟ್ಟಿರುವ ಮುತಾಲೀಕರನ್ನಾಗಲಿ ಕಳುಹಿಸಬಹುದು. ಚಡಸವಾಲ್ ಮಾಡಲಪೇಕ್ಷೆಯುಳ್ಳವರು ಖಾತರೀ ಬಗ್ಗ್ಯಾಗಿ ಒಂದುನೂರು ರೂಪಾಯಿಗಳನ್ನ ಹರಾಜು ಕಾಲದಲ್ಲಿ ಹರಾಜು ಮಾಡುವ ಆಫಿಸರವರಲ್ಲಿ ಠೇವಣಿ ಇಡಬೇಕು. ತಿರಸ್ಕರಿಸಲ್ಪಟ್ಟ ದರಖಾಸ್ತುದಾರ್ರು ಹಾಜರ್ಮಾಡಿದ್ದ ಡಿಪಾಜಿಟ್ ಮೊಬಲಗು ಹರಾಜು ಖೈದಾದ ಕೂಡ್ಲೆ ವಾಪಸ್ ಮಾಡಲ್ಪಡುತ್ತೆ. ಪ್ರತಿ ಒಂದು ತಾಲ್ಲೂಕಿನ ಸವಾಲ್ ಖೈದಾದ ಒಡನೆಯೇ ಅಂಗೀಕರಿಸಲ್ಪಟ್ಟ ಸವಾಲ್‌ದಾರ್ರುಗಳು ತಮ್ಮ ಸವಾಲಿನ ಬಟ್ಟು ಮೊಬಲಗಿನಲ್ಲಿ ಮೊದಲ್ ಹಾಜರ್ಮಾಡಿದ್ದ ಮೊಬಲಗೂ ಸೇರಿ ಕಾಲು ಹಿಸ್ಸೆಯನ್ನ ಪಾವತಿ ಮಾಡಬೇಕು. ಇದಕ್ಕೆ ತಪ್ಪಿದಲ್ಲಿ ಮೊದಲ್ ಇಟ್ಟಿದ್ದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುವದಲ್ಲದೆ ಬಾಬ್ ದುಸರಾ ಹರಾಜು ಮಾಡಿಸುವದರಲ್ಲಿ ಉಂಟಾಗುವ ನಷ್ಟಕ್ಕೂ ಸಹ ಈತನನ್ನೇ ಗುರಿಮಾಡಲ್ಪಡುತ್ತೆ. ಆದರೆ ಆದಾಯ ಏನಾದರೂ ಹೊರಟಲ್ಲಿ ಸದರ್ರೀಯವನಿಗೆ ಅದರ ಹಕ್ಕು ಇರುವದಿಲ್ಲ.

(5) ಮೇಲ್ಕಂಡ ಮೇರಿಗೆ ನಡಿಸಲ್ಪಡಬೇಕಾಗಿ ಬರುವ ಎರಡನೇ ಹರಾಜಿನ ಆಖೈರ್ ಸವಾಲ್‌ಗಿಂತಲೂ ಮೊದಲನೇ ಹರಾಜಿನಲ್ಲಿ ಜಾಸ್ತಿಯಾಗಿ ವುಂಟಾಗಿದ್ದ ಮೊಬಲಗನ್ನು ಮೊದಲನೇ ಹರಾಜಿನ ಆಖೈರ್ ಸವಾಲ್‌ದಾರನು ಸರ್ಕಾರಕ್ಕೆ ಪಾವತಿ ಮಾಡಬೇಕು.

(6) ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರಾದ 3 ದಿವಸದೊಳಗಾಗಿ ಈ ಕೆಳಗೆ ನಮೂದಿಸಿರುವ ಷರತ್ತುಗಳ ಕಂಡು ನಡದುಕೊಳ್ಳತಕ್ಕ ಬಗ್ಯೆ ಬದ್ಧನಾಗಿ ಇಜಾರೇದಾರನು ಮುಚ್ಚಳಿಕೆ ಬರೆದುಕೊಡಬೇಕು.

(7.) ಇಜಾರೆ ಬಾಬತು ಬಾಕಿ ಮುಕ್ಕಾಲು ಹಿಸ್ಸೆಯನ್ನು ಇದೇ ಇಸವಿ ಮೇ ಮಾಹೆ ಆಖೈರೊಳಗಾಗಿ ಪಾರ್ಖಾವಣಿ ಮಾಡತಕ್ಕದ್ದು. ಅದಕ್ಕೆ ತಪ್ಪಿದಲ್ಲಿ ಮೊದಲು ಪಾವತಿಯಾದ ಕಾಲುಹಿಸ್ಸೆ ಠೇವಣಿಯು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತದೆ ಯಲ್ಲದೆ ಚಕ್ಕೆ ಜಮಾಯಿಸುವ ಇಜಾರೆ ಹಕ್ಕನ್ನು ಪುನಹ ಹರಾಜು ಮಾಡುವದರಲ್ಲಿ ಬಂದೀತು.

(8.) ಮೇಲ್ಕಂಡ ಮೇರೆ ಪೂರ್ತಾ ಮೊಬಲಗು ಇರಸಾಲ್ ಆದನಂತರ ಈ ಕೆಳಗೆ ನಮೂದಿರುವ ಷರತ್ತುಗಳು ಕಂಡು ಒಂದು ರೂಪಾಯಿನ ಛಾಪಾ ಕಾಗದದಲ್ಲಿ ಇದೇ ಇಸವಿ ಜೂನ್ ಗುರ್ರೇ ತಾರೀಖಿನಲ್ಲಿ ಕರಾರ್ ಬರದುಕೊಟ್ಟು ಅನಂತರ ಬಾಬು ಸುಪರ್ದು ಹೊಂದಬೇಕಾಗಿರುತ್ತೆ.

ಷರತ್ತುಗಳು ಯಾವವಂದರೆ.

(1) ಒಂದು ವರುಷಕ್ಕಿಂತಲೂ ಎಳೇದಾದ ಗಿಡಗಳನ್ನ ಕಡಿಯುವದಿಲ್ಲ.

(2) ಕಡಿಯುವ ವಿಶಿಷ್ಟ ಮೋಟು ಮತ್ತು ರಂಬೆಗಳಲ್ಲಿರುವ ಚಕ್ಕೆಯನ್ನ ನಿಶ್ಯೇಷವಾಗಿ ತೆಗೆದುಕೊಳ್ಳುತ್ತೇನೆ ಯಾವ ಗಿಡವನ್ನಾಗಲಿ ಸುಮ್ಮನೆ ಕಡಿದು ಬೊಬ್ಬಡೆಯನ್ನ ತೆಗೆಯದೆ ಬಿಸಾಡುವದಿಲ್ಲ.

(3) ಚಕ್ಕೆಯನ್ನ ತೆಗೆದನಂತರ ವಿಶಿಷ್ಟ ಸಾದೆಯೂ ಇಜಾರದಾರನಿಗೆ ಸೇರಿದ್ದೇ ಶಿವಾಯಿ ಸರ್ಕಾರಕ್ಕೆ ಸೇರಿದ್ದಲ್ಲ.

(4) ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರವರು ಮೊಕರರ್ ಮಾಡುವ ಮೇರೆಗೆ ನನ್ನ ಕರಾರು ಅನುಸರಿಸಿ ಜಮಾಯಿಸಿ ಸಾಗಿಸಿಕೊಂಡು ಹೋಗುವ ಚಕ್ಕೆಗೆ ತಪ್ಸೀಲಾಗಿ ಲೆಖ್ಖ ಇಡುತ್ತೇನೆ ಯಲ್ಲದೆ ಈ ಬಾಬತ್ತು ಲೆಖ್ಖವನ್ನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಕೇಳಿದಾಗ್ಯೆ ತನಿಖೆಬಗ್ಯೆ ಹಾಜರ್ಮಾಡುತ್ತೇನೆ.

(5) ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಹುಕುಂ ಮಾಡುವ ಮೇರೆ ನಾನು ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿಯ ಚಕ್ಕೆಗೂ ಪ್ಯಾಸ್ ಕೊಡುತ್ತೇನೆ.

(6) ನಾನು ಜಮಾಯಿಸುವ ವಿಶಿಷ್ಟ ಚಕ್ಕೆಯನ್ನೂ 1897ನೇ ಇಸವಿ ಜೂನ್ ಆಖೈರೊಳಗಾಗಿ ನಿಶ್ಯೇಷವಾಗಿ ನನ್ನ ಇಜಾರೆ ತಾಲ್ಲೂಕಿನಿಂದ ಹೊರಗೆ ಸಾಗಿಸಿಕೊಂಡು ಹೋಗುತ್ತೇನೆ.

(7) ಸ್ಟೇಟ್ ಫಾರೆಸ್ಟ್ ಮತ್ತು ಪ್ಲ್ಯಾಂಟೇಷನ್‌ಗಳಲ್ಲಿ ಸಹ ನನ್ನಿಂದಲಾಗಲಿ ನನ್ನ ಕಡೆ ಜನಗಳಿಂದಲಾಗಲಿ ಬೆಂಕಿಯ ಅಥವಾ ಇನ್ಯಾವ ಕಾರಣದಿಂದಾಗ್ಯೂ ಖರೀದಿ ಬಾಳತಕ್ಕ ಮರಗಳು ಅಥವಾ ಫಸಲ್‌ಗಳು ನಾಶವಾದಲ್ಲಿ ಅದರಿಂದ ವುಂಟಾಗುವ ನಷ್ಟಕ್ಕೆ ನಾನೇ ಜವಾಬ್ ಮಾಡಲು ಬದ್ಧನಾಗಿದ್ಧೇನೆ.

(8) ಮೇಲ್ಕಂಡ ಷರತ್ತುಗಳ ಪೈಕಿ ಯಾವದನ್ನಾದರೂ ನಾನಾಗಲಿ ನನ್ನ ತರಫ ಜನಗಳಾಗಲಿ ಅತಿಕ್ರಮಿಸಿ ನಡೆದಲ್ಲಿ ನನ್ನ ಇಜಾರೆಯನ್ನ ರದ್ದು ಮಾಡಬಹುದು. ಮತ್ತು ನಾನು ಅದುವರಗೆ ಜಮಾಯಿಸಿ ಹಾಜರಿಟ್ಟುಕೊಂಡಿರತಕ್ಕ ಚಕ್ಕೆಯನ್ನ ಸರ್ಕಾರದವರು ಜಪ್ತಿ ಮಾಡಬಹುದಲ್ಲದೆ ನಾನು ಪಾವತಿ ಮಾಡಿರುವ ಮೊಬಲಗನ್ನ ಪೂರ್ತಿಯಾಗಿ ಯಾಗಲಿ ಅಥವಾ ಆ ಪೈಕಿ ಕೆಲವು ಭಾಗವನ್ನಾಗಲಿ ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಬಹುದು.

ಬಿ. ರಾಮಸ್ವಾಮಯ್ಯರ್,
ಫಾರ್ ಡೆಪ್ಯುಟಿ ಕಮ್ಮಿಷನರ.